**ಕಾರ್ಮಿಕ ನ್ಯಾಯಾಲಯ, ಮೈಸೂರು.**

**IID** :03/2025

ಡಬ್ಲ್ಯೂ.ಡಬ್ಲ್ಯೂ-7

**ದಿನಾಂಕ 08.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಹೆಚ್.ಕೆ.ಜೆ. ವಕೀಲರಿಂದಃ**

2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಈ ವಿವಾದವನ್ನು ಮಾಡುವ ಮುಂಚೆ ಎಷ್ಟು ದಿನ ಕೆಲಸ ಮಾಡಿರುತ್ತೀರ ಎಂದರೆ ಸಾಕ್ಷಿ ಒಂದು ತಿಂಗಳು ಕೆಲಸ ಮಾಡಿರುತ್ತೇನೆ ಎನ್ನುತ್ತಾರೆ. ದಿನಾಂಕಃ 05.05.2025 ರಲ್ಲಿ ನೇಮಕಾತಿ ಆದೇಶ ಕೊಡುವ ಮುಂಚೆ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸ ಮಾಡಿರುವುದಿಲ್ಲ. ನಂಜನಗೂಡು ಸರ್ವೆ ಇಲಾಖೆಯಲ್ಲಿ ಬೇರೆ ಬೇರೆ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ನಂಜನಗೂಡು ಸರ್ವೆ ಇಲಾಖೆಯಲ್ಲಿ ಗುತ್ತಿಗೆದಾರರು ಬದಲಾಗುತ್ತಿರುತ್ತಾರೆ, ಇದಕ್ಕೆ ಮುಂಚೆ 2 ನೇ ಪಕ್ಷಗಾರರು ನನ್ನನ್ನು ಅಲ್ಲಿ ಕೆಲಸಕ್ಕೆ ತೆಗೆದುಕೊಂಡಿಲ್ಲ ಎಂದರೆ ಸರಿ. Man power supply ಸಂಬಂಧ ಟೆಂಡರ್ ಕರೆಯುವುದು ಇತ್ಯಾದಿ ಕೆಲಸಗಳನ್ನು ಸರ್ಕಾರ ಮಾಡುತ್ತದೆ ಎಂದರೆ ಸರಿ. ಗುತ್ತಿಗೆ ಅಡಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಜವಾಬ್ದಾರಿಗಳನ್ನು ನಿರ್ಧರಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ ಎಂದರೆ ಸರಿ. ಗುತ್ತಿಗೆದಾರರಿಗೆ ಟೆಂಡರ್ ಕರೆ ಮಾಡಿದಾಗ ಕೆಲಸಗಾರರು 10 ನೇ ತರಗತಿ ತೇರ್ಗಡೆ ಹೊಂದಿರಬೇಕು ಎಂದು ಷರತ್ತು ವಿಧಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಷರಿತ್ತಿನ ಆಧಾರದ ಮೇಲೆ 2 ನೇ ಪಕ್ಷಗಾರರ ಸಂಸ್ಥೆಯವರು ನಮ್ಮ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ತಂದು ಕೊಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ.

2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ 2017 ರಿಂದ 70 ಜನ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ಸಾಕ್ಷಿಗೆ ದಿನಾಂಕಃ03.03.2025 ರ ಟೆಂಡರ್ ನೋಟಿಫಿಕೇಷನ್ ದಾಖಲೆಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿರುತ್ತಾರೆ.

ಸದರಿ ದಾಖಲೆಯನ್ನು **ನಿ.ಎಂ.1** ಎಂದು ಗುರುತಿಸಲಾಯಿತು. ಸದರಿ ಷರತ್ತುಗಳ ಪ್ರಕಾರ 10 ನೇ ತರಗತಿ ತೇರ್ಗಡೆ ಹೊಂದಿರುವ ಬಗ್ಗೆ ಅಂಕಪಟ್ಟೆಗಳನ್ನು ನೀಡಿರುವ ಕಾರ್ಮಿಕರನ್ನು ಉಳಿಸಿಕೊಂಡು ಉಳಿದವರನ್ನು ಕೈ ಬಿಟ್ಟಿರುತ್ತಾರೆ ಎಂದರೆ ಸಾಕ್ಷಿ 7 ಜನರನ್ನು ತೆಗೆದು ಹಾಕಿರುತ್ತಾರೆ ಎನ್ನುತ್ತಾರೆ. ಸದರಿ ಟೆಂಡರ್ ನೋಟಿಫಿಕೇಷನ್ ಹೊರಡಿಸಿದ ನಂತರ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಎಲ್ಲರು ತಂದು ಹಾಜರು ಪಡಿಸಬೇಕು ಎಂದು ತಿಳಿಸಿದ್ದರು ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯವರು ಇಲಾಖೆಗೆ ಪತ್ರ ಬರೆದು ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಮತ್ತು ಜಾತಿ ಪ್ರಮಾಣ ಪತ್ರವನ್ನು ಎಲ್ಲರು ತಂದು ಹಾಜರು ಪಡಿಸಬೇಕು ಎಂದು ತಿಳಿಸಿದ್ದರು ನನಗೆ ಗೊತ್ತಿಲ್ಲ. ನನಗೆ ಅರ್ಹತೆ ಇಲ್ಲದೆ ಇದ್ದ ಕಾರಣ ಸರ್ಕಾರದ ಅನುಮತಿ ಪಡೆದು ನನ್ನನ್ನು ಕೈ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಪೈಕಿ ನಮ್ಮನ್ನು ಕೆಲಸದಿಂದ ತೆಗೆಯುವುದಕ್ಕೆ ಮುಂಚೆ ಯಾರಾದರು 10 ನೇ ತರಗತಿ ತೇರ್ಗಡೆ ಹೊಂದಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಆದ್ದರಿಂದ ಸಕಾರಣದಿಂದ ನಮ್ಮನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**